ಜವಳಿ ಅಭಿವೃದ್ಧಿ ಆಯುಕ್ತರು
ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು
ಜವಳಿ ರವರ ಕಚೇರಿ

ಕರ್ನಾಟಕ ಸರ್ಕಾರ

ಶುಭೋದಯ ಕಾಂಪ್ಲೆಕ್ಸ್,
# 86, ರೇಲ್ವೇ ಪಾರಲೆಲ್ ರಸ್ತೆ,
ಕುಮಾರ ಕೃಪಾ ಪಶ್ಚಿಮ,
ಬೆಂಗಳೂರು 20

ಸಂಖ್ಯೆ:ಕೈಜಇ:ಕೈಮಗ್ಗ:ಅಧೀ:ಸಾಲಮನ್ನಾ:ಮಾಹಿತಿ:207-18 ದಿನಾಂಕ: 04-01-2018

## ಸುತ್ತೋಲೆ

ವಿಷಯ:- ನೇಕಾರರ ಸಾಲಮನ್ನಾ ಯೋಜನೆ 2017 - ನೇಕಾರರ ಸಾಲಮನ್ನಾ ಪ್ರಕ್ರಿಯೆ ಹಾಗೂ ಚೆಕ್‌ಲಿಸ್ಟ್.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ ವಾಕೈ 57 ಜಕೈಯೋ 2017, ಬೆಂಗಳೂರು, ದಿನಾಂಕ 13-12-2017.

-*_*_*_

ರಾಜ್ಯದ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ 30-06-2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ.50,000/- (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಮಾಡಲು ಉಲ್ಲೇಖಿತ ಆದೇಶದನ್ವಯ ನಿರ್ಧರಿಸಲಾಗಿದೆ.

ಸಾಲಮನ್ನಾ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಸಾಲಮನ್ನಾ ಕ್ಲೈಮ್ ಬಿಲ್ಲುಗಳನ್ನು ಜಾಲಧಾರಿತ ತಂತ್ರಾಂಶದ ಮೂಲಕ ಸಲ್ಲಿಸುವಂತೆ ಈಗಾಗಲೇ ಕ್ರಮವಿಡಲಾಗಿದೆ. ಇದರ ಪ್ರಕ್ರಿಯೆ ಈ ಕೆಳಕಂಡಂತಿರುತ್ತದೆ.

1. ಅನ್ವಯವಾಗುವ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ತಂತ್ರಾಂಶವನ್ನು ಉಪಯೋಗಿಸಲು User Name and Password ನೀಡಲಾಗುವುದು.

2. ಜವಳಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ, ಜವಳಿ ಹಾಗೂ ಕೈಮಗ್ಗ ಇಲಾಖೆ, ಬೆಂಗಳೂರು ಈ ಕಛೇರಿಗೆ ಈಗಾಗಲೇ ಸ್ವೀಕೃತಿಯಾದ ನೇಕಾರರವಾರು ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿ access ನ್ನು ನೀಡಲಾಗುವುದು.

3. ಮೇಲೆ ತಿಳಿಸಿರುವ ಪ್ರತಿ ಸಂಘದ ಯೂಸರ್‌ಗಳು ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯನ್ನು ಪರಿಶೀಲಿಸಿ ಸಂಘದ ದಾಖಲಾತಿಗಳ ಪ್ರಕಾರ ಸರಿಯಾಗಿರುತ್ತದೆ ಎಂದು ದೃಢೀಕರಿಸತಕ್ಕದ್ದು.

4. ಅಪ್‌ಲೋಡ್ ಮಾಡಿರುವ ಮಾಹಿತಿಯಲ್ಲಿ ತಪ್ಪಾಗಿ ನಮೂದಾಗಿದ್ದರೆ ಸರಿಪಡಿಸಲು Edit option ನ್ನು ನೀಡಲಾಗಿದೆ.

5. ಮಾಹಿತಿಯನ್ನು ದೃಢೀಕರಿಸುವಾಗ ಈ ಕೆಳಕಂಡ ಮಾಹಿತಿಗಳ ಬಗ್ಗೆ ವಿಶೇಷ ಗಮನ ನೀಡತಕ್ಕದ್ದು.
    1. ನೇಕಾರರ ಹೆಸರು
    2. ಆಧಾರ್ ಸಂಖ್ಯೆ
    3. ತಂದೆ/ಗಂಡನ ಹೆಸರು
    4. ಅನುಮೋದಿತ ಸಾಲದ ಮೊತ್ತ
    5. ಸಾಲ ನೀಡಿದ ದಿನಾಂಕ
    6. ಗಡುವು ದಿನಾಂಕ
    7. ದಿನಾಂಕ 30.06.2017ಕ್ಕೆ ಹೊರಬಾಕಿ
    8. ಚಾಲ್ತಿ ಸಾಲಕ್ಕೆ – ಹೊರಬಾಕಿ (ಅಸಲು)
    9. ಚಾಲ್ತಿ ಸಾಲಕ್ಕೆ – ಬಡ್ಡಿ
    10. ಸುಸ್ತಿ ಸಾಲಕ್ಕೆ – ಹೊರಬಾಕಿ (ಅಸಲು)
    11. ಸುಸ್ತಿ ಸಾಲಕ್ಕೆ – ಬಡ್ಡಿ
    12. ಚಾಲ್ತಿ ಸಾಲಕ್ಕೆ ದಿನಾಂಕ 30.06.2017 ರಿಂದ ಗಡುವು ದಿನಾಂಕಕ್ಕೆ ಅನ್ವಯವಾಗುವ ಬಡ್ಡಿ

6. ಎಲ್ಲಾ ಮಾಹಿತಿಗಳನ್ನು ತಂತ್ರಾಂಶದಲ್ಲಿ ಆಂಗ್ಲ ಬಾಷೆಯಲ್ಲಿ ಭರ್ತಿ ಮಾಡತಕ್ಕದ್ದು.
7. ಸಾಲದ ಅವಧಿಯು 366 ದಿನಗಳಗಿಂತ ಕಡಿಮೆ ಅಥವಾ ಸಮನಾಗಿದ್ದರೆ ಮಾತ್ರ ಅಂತಹ ಸಾಲಗಳು ಅಲ್ಪಾವಧಿ ಸಾಲಗಳೆಂದು ಪರಿಗಣಿಸಿ ಸಾಲಮನ್ನಾ ಯೋಜನೆಗೆ ಅರ್ಹವಾಗುವುದು.

8. ಎಲ್ಲಾ ಸಾಲಗಳಿಗೆ ದಿನಾಂಕ 30.06.2017 ಕ್ಕೆ ಇದ್ದಂತಹ ಅಸಲು ಮತ್ತು ಬಡ್ಡಿ ಸೇರಿಸಿ ಒಟ್ಟು ಮೊತ್ತವನ್ನು ನಿರ್ಧರಿಸಲಾಗುವುದು.
9. ಒಟ್ಟು ಮೊತ್ತವು ರೂ.50,000/- ಕ್ಕಿಂತ ಕಡಿಮೆ ಅಥವಾ ಸಮವಾಗಿದ್ದಲ್ಲಿ ಅಂತಹ ಸಾಲಗಳನ್ನು ಪೂರ್ಣವಾಗಿ ಮನ್ನಾ ಮಾಡಲಾಗುವುದು
10. ಒಟ್ಟು ಮೊತ್ತವು ರೂ.50,000/- ಕ್ಕಿಂತ ಹೆಚ್ಚಿದ್ದಲ್ಲಿ ರೂ.50,000/- ಕ್ಕಿಂತ ಅಧಿಕವಿರುವ ಮೊತ್ತವನ್ನು ನೇಕಾರರು ಪಾವತಿಸಿದಾಗ ಮಾತ್ರ ಸಾಲಮನ್ನಾ ಯೋಜನೆಗೆ ಅರ್ಹತೆ ಪಡೆಯುತ್ತಾರೆ. ಇಂತಹ ಖಾತೆಗಳ ಮರುಪಾವತಿಸಿದ ವಿವರಗಳನ್ನು ನಮೂದಿಸಲು ತಂತ್ರಾಂಶದ transaction form ನಲ್ಲಿ ಅವಕಾಶ ಮಾಡಲಾಗಿದೆ. ಇಂತಹ ವಿವರಗಳನ್ನು ನಮೂದಿಸಲು ಉದಾಹರಣೆಯನ್ನು ಈ ಕೆಳಗೆ ನೀಡಲಾಗಿದೆ.

11. ಈ ಮೇಲ್ಕಂಡ ಪ್ರಕ್ರಿಯೆಯಲ್ಲಿ ತಾಂತ್ರಿಕ ಸ್ಪಷ್ಟೀಕರಣ ಬೇಕಿದ್ದ ಸಂಧರ್ಭದಲ್ಲಿ ಈ ಕೆಳಕಂಡ ಸಹಾಯಕ ದೂರವಾಣಿ ಸಂಖ್ಯೆಗೆ ಕರೆಮಾಡಿ ಮಾಹಿತಿ ಪಡೆದು ಕ್ರಮ ವಹಿಸುವುದು. (ತಾಂತ್ರಿಕ ಸಹಾಯವಾಣಿ ಸಂಖ್ಯೆ: 9844228449)

**Example 1:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 55,000 | 6,600 | 66,600 |

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 50,000 | 6,600 | 50,000 | 0 |

--3

**Example 2:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 46,000 | 4,000 | 50,000 |

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 46,000 | 4,000 | 46,000 | 4,000 |

**Example 3:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 50,000 | 6,000 | 56,000 |

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 0 | 6,000 | 50,000 | 0 |

**Example 4:**

| Due Date | Principal Outstanding | Interest as on 30.06.2017 | Total Due |
|---|---|---|---|
| 31-July-2017 | 48,000 | 5,760 | 53,760 |

Transaction Values to be entered in the software

| Date of Repayment | Principal Repayment | Interest Repayment | Principal Waiver | Interest Waiver |
|---|---|---|---|---|
| 31-July-2017 | 0 | 3,760 | 48000 | 2000 |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ರವರಿಗೆ:-

1. ಅಧಿಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು
2. ಜಂಟಿ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಪೂರ್ವ/ಪಶ್ಚಿಮ/ದಕ್ಷಿಣ/ಉತ್ತರ ವಲಯ
3. ಕೈಮಗ್ಗ ನೇಕಾರರ ಸಹಕಾರಿ ಸಂಘಗ'ಳ ಜಂಟಿ ನಿಬಂಧಕರು ಕೇಂದ್ರ ಕಛೇರಿ ಬೆಂಗಳೂರು
4. ಉಪ/ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ------------------ಜಿಲ್ಲೆ
5. ಉಪ ನಿರ್ದೇಶಕರು ಕೈಮಗ್ಗ, ಜವಳಿ, ಬಂಡವಾಳ, ತರಬೇತಿ ಕೇಂದ್ರ ಕಛೇರಿ ಬೆಂಗಳೂರು
6. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ ಬೆಂಗಳೂರು

7. ಸಂಬಂಧಿಸಿದ ನೇಕಾರರ ಸಹಕಾರಿ ಸಂಘಗಳು / ಸಂಸ್ಥೆಗಳಿಗೆ ಆಯಾ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ.
8. ಮೆ: ಯು.ಸಿ.ಬಿಎಸ್ ಕನ್ಸಲ್ಟಂಟ್ಸ್ ಗಿರಿನಗರ, ಬೆಂಗಳೂರು ಇವರಿಗೆ ನೀಡುತ್ತಾ ಸಂಸ್ಥೆ ಹಾಗೂ ಜಿಲ್ಲಾ/ವಲಯ ಮಟ್ಟದ ಅಧಿಕಾರಿಗಳಿಗೆ ಪೂರ್ಣ ಮಾಹಿತಿ ಮತ್ತು ಸಹಕಾರ ನೀಡಲು ತಿಳಿಸಿದೆ.
9. ಕಛೇರಿ ಪ್ರತಿ.

<u>ಪ್ರತಿಯನ್ನು:-</u>

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ ಬೆಂಗಳೂರು ಇವರ ಘನ ಅವಗಾಹನೆಗೆ ಸಲ್ಲಿಸಲಾಗಿದೆ.
2. ಸಹಕಾರಿ ಸಂಘಗಳ ನಿಬಂಧಕರು, ಆಲಿಆಸ್ಕರ್ ರಸ್ತೆ ಬೆಂಗಳೂರು ಇವರ ಮಾಹಿತಿಗಾಗಿ
3. ನಿರ್ದೇಶಕರು ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಶಂಕರ ಮಠ ರಸ್ತೆ ಬಸವನಗುಡಿ ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ತಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ / ಮಾಹಿತಿ ನೀಡಲು ಕೋರಿ ನೀಡಿದೆ.
4. ಕಛೇರಿ ಪ್ರತಿ.